# ಕರಗುತಿಹುದು ರಂಗಭೂಮಿಯ ರಂಗು

ಎರಡು ಮೂರು ದಶಕಗಳ ಹಿಂದೆ ಕನ್ನಡ ಹವ್ಯಾಸಿ ರಂಗಭೂಮಿ ತನ್ನ ಕ್ರಿಯಾಶೀಲತೆಯ ಉತ್ತುಂಗದಲ್ಲಿತ್ತು. ಗಿರೀಶ ಕಾರ್ನಾಡ, ಪಿ. ಲಂಕೇಶ್, ಚಂದ್ರಶೇಖರ ಪಾಟೀಲ, ಕಂಬಾರ ಮತ್ತಿತರರ ನಾಟಕಗಳ ಜೊತೆಗೆ ಆಧುನಿಕ ಅನುವಾದಿತ ನಾಟಕಗಳು ಕನ್ನಡ ರಂಗಭೂಮಿಗೆ ಹೊಸ ಸ್ಪರ್ಶ, ಜೀವ ಕೊಟ್ಟಿದ್ದವು. ಆಧುನಿಕ ನಾಟಕಗಳನ್ನು ಪ್ರದರ್ಶಿಸದ ಊರುಗಳೇ ಆಗ ಕರ್ನಾಟಕದಲ್ಲಿ ಇರಲಿಲ್ಲ ಎನ್ನಬಹುದು. ರಂಗಭೂಮಿ ಹಲವು ಬಗೆಯ ಪ್ರಯೋಗಗಳಲ್ಲಿ, ಸಾಹಸಗಳಲ್ಲಿ, ಹೊಸ ದಿಗಂತಗಳ ಹುಡುಕಾಟದಲ್ಲಿ ತೊಡಗಿಸಿಕೊಂಡ ಕಾಲ ಅದಾಗಿತ್ತು. ಆ ಚೈತನ್ಯ ಹೊಮ್ಮಿದ್ದು ಕೂಡ ಏಕಕಾಲದಲ್ಲಿ ಅನೇಕ ಬಗೆಯ ಪ್ರತಿಭಾವಂತರ ತೊಡಗಿಸಿಕೊಳ್ಳುವಿಕೆಯಿಂದ. ಆಗಿನ ಗಾಳಿಯಲ್ಲೇ ಎಲ್ಲರನ್ನೂ ಎಲ್ಲವನ್ನೂ ನಾಟಕಕ್ಕೆ ಸೆಳೆದುಕೊಳ್ಳುವ ಗುಣವಿತ್ತು. ಹಾಗಾಗಿಯೇ 70–80ರ ದಶಕಗಳನ್ನು ಆಧುನಿಕ ಕನ್ನಡ ರಂಗಭೂಮಿಯ ಸುವರ್ಣಯುಗ ಎನ್ನಬಹುದು.

ಈ ರಂಗದ ಕಣ್ಣುಕೋರೈಸುವ ಹೊಳಪು ಬಹುಕಾಲ ಉಳಿಯಲಿಲ್ಲ. ಅದು ಬಹುಬೇಗ ಏಕತಾನತೆಗೆ ಸಿಲುಕಿತು. ನಮ್ಮ ದೈನಿಕದ ಬದುಕನ್ನು ಪ್ರತಿಫಲಿಸುವ, ವರ್ತಮಾನದ ಅನುಭವಕ್ಕೆ ರೂಪಕವಾಗುವಂತಹ ನಾಟಕಗಳು ರಂಗಮಂಚದ ನೇಪಥ್ಯಕ್ಕೆ ಸರಿಯಲು ಆರಂಭಿಸಿದವು. ಕಾರ್ನಾಡರ ನಾಟಕಗಳನ್ನು ಬಿಟ್ಟರೆ ಗಾಢವಾಗಿ ತಟ್ಟುವಂತಹ ಹೊಸ ನಾಟಕಗಳ ಸೃಷ್ಟಿ ಕೂಡ ಕಡಿಮೆಯಾಗುತ್ತ ಸಾಗಿತು. ತಾಂತ್ರಿಕವಾಗಿ ಬೆಳೆದ ರಂಗಭೂಮಿ, ಪಠ್ಯದ ವಸ್ತು ವಿಷಯಗಳ ದೃಷ್ಟಿಯಿಂದ ಹೆಚ್ಚು ಆಳವನ್ನು ಪಡೆಯಲಿಲ್ಲ; ಅನುಭವದ ಹೊಸ ಮಂಡನೆಯನ್ನು ಕಾಣಲಿಲ್ಲ. ಸಮೂಹಕಲೆಯಾದ ನಾಟಕ ನಿರ್ದೇಶಕನೊಬ್ಬನ ಏಕವ್ಯಕ್ತಿ ಪ್ರದರ್ಶನವಾಗತೊಡಗಿತು. ಮಾತ್ರವಲ್ಲ, ಆ ಕಲೆಯನ್ನು ಬೆಳೆಸಬೇಕಿದ್ದ ಪ್ರತಿಭಾವಂತರ ಪ್ರತಿಭೆ ನಿತ್ಯಗೋಳಿನ ಧಾರಾವಾಹಿಗಳಲ್ಲಿ ವ್ಯಯವಾಯಿತು. ಕನ್ನಡದಲ್ಲಿ ನಾಟಕವನ್ನೇ ವೃತ್ತಿಯಾಗಿ ತೆಗೆದುಕೊಳ್ಳುವುದು ಆ ಕಲೆಯ ಮೇಲಿನ ಗಾಢ ಬದ್ಧತೆ, ಮೋಹ ಇದ್ದವರಿಗೆ ಮಾತ್ರ ಆಗುವಂಥದ್ದು. ಬದುಕನ್ನು ಪಣಕಿಟ್ಟು ಆಡುವ ಜೂಜು, ಹುಚ್ಚು ಪ್ರೇಮ ಎಲ್ಲ ಕಾಲದಲ್ಲೂ ಎಲ್ಲರಿಗೂ ಸಾಧ್ಯವಿಲ್ಲ.

ಸರ್ಕಾರೀ ಹಣದ ಬೆಂಬಲ ಇಲ್ಲದೆ ನಾಟಕಗಳ ಪ್ರದರ್ಶನ ಅಸಾಧ್ಯ ಎಂಬ ಸನ್ನಿವೇಶ ಈಗಿತ್ತಲಾಗಿ ಹೆಚ್ಚಾಗಿದೆ. ಸರ್ಕಾರವನ್ನು ಅತಿಯಾಗಿ ಅವಲಂಬಿಸುವ ಯಾವುದೇ ಕಲೆಗೆ ಆತ್ಮ ಮತ್ತು ಕಲಾವಿದರಿಗೆ ಆತ್ಮಗೌರವ ಇರಲಾರದು. ಹವ್ಯಾಸಿ ರಂಗಭೂಮಿ ವೈಚಾರಿಕವಾಗಿ ಜನರನ್ನು ಮುಟ್ಟುವ, ಎಚ್ಚರಿಸುವ ಮತ್ತು ಸದ್ಯಕ್ಕೆ ಮುಖಾಮುಖಿಯಾಗುವ ತನ್ನ ಮೂಲಭೂತ ಹೊಣೆಗಾರಿಕೆಯನ್ನು ಸಹ ಈಚಿನ ದಿನಗಳಲ್ಲಿ ಸರಿಯಾಗಿ ನಿಭಾಯಿಸಿದಂತಿಲ್ಲ.

ಈ ದಿಸೆಯಲ್ಲಿ ನಮ್ಮ ನಾಡಿನ ಚಿಂತನಶೀಲ, ಚಲನಶೀಲ ರಂಗನಿರ್ದೇಶಕ ನಟರಾಜ್ ಹೊನ್ನವಳ್ಳಿ ರಂಗಭೂಮಿಯ ಕುರಿತಂತೆ ಆಡಿದ ಮನನೀಯ ಮಾತುಗಳು ಈ ಸಂಚಿಕೆಯಲ್ಲಿವೆ. ಅವರ ಅನುಭವದ ಮಾತುಗಳು ಹೊಸ ಮಿಂಚುಗಳನ್ನು ಹೊಳೆಸುವಂತಿವೆ. ಈಚೆಗೆ ನಿಧನರಾದ, ನಾಡು–ನುಡಿಯ ಕುರಿತಂತೆ ಅಗಾಧ ಕೆಲಸ ಮಾಡಿದ ಸಂಶೋಧಕ ಷ. ಶೆಟ್ಟರ್ ಅವರೊಂದಿನ ಒಡನಾಟದ ಕುರಿತು ಅವರ ಸಹಪಾಠಿ, ರೈತ ಮುಖಂಡ ಕಡಿದಾಳು ಶಾಮಣ್ಣ ಅವರ ನೆನಪಿನ ಚಿತ್ರಣ ಈ ಸಂಚಿಕೆಯಲ್ಲಿದೆ.

**ಸಂದೀಪ ನಾಯಕ**

